ಕರ್ನಾಟಕ ಸರ್ಕಾರ

ಸಂಖ್ಯೆ:ಆಇ 11 ಮಕಮು 2010

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ: 06.03.2011.

## ಸುತ್ತೋಲೆ

ವಿಷಯ ಮುಂಗಡ ಮತ್ತು ಮುಂಗಡದ ಮೇಲಿನ ಬಡ್ಡಿ ಕಂತುಗಳ ವಿವರಗಳನ್ನು ವೇತನ ಚೀಟಿಯಲ್ಲಿ ನಮೂದಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರಿ ಆದೇಶ ಸಂಖ್ಯೆ: ಆಇ 48 ಮಕಮು 94, ದಿನಾಂಕ: 21.10.1994.
2. ಸರ್ಕಾರಿ ಆದೇಶ ಸಂಖ್ಯೆ: ಆಇ 13 ಮಕಮು 2008, ದಿನಾಂಕ: 14.08.2008.

–0–

ಸರ್ಕಾರಿ ನೌಕರರುಗಳಿಗೆ ಮೋಟಾರು ವಾಹನಗಳ ಖರೀದಿ ಮುಂಗಡ, ಗಣಕ ಯಂತ್ರ ಮುಂಗಡ, ಸಾಧನ ಸಾಮಗ್ರಿ ಮುಂಗಡ, ಹಬ್ಬದ ಮುಂಗಡ, ಸೋಲಾರು ವಾಟರ್ ಹೀಟರ್ ಮುಂಗಡ ಮತ್ತು ಸೋಲಾರ್ ಕುಕ್ಕರ್ ಮುಂಗಡಗಳನ್ನು ಉಲ್ಲೇಖ (2)ರಲ್ಲಿನ ದಿನಾಂಕ: 14.08.2008ರ ಆದೇಶದ ರೀತ್ಯ ಮಂಜೂರು ಮಾಡಲಾಗುತ್ತಿದೆ. ಈ ಮುಂಗಡ ಮತ್ತು ಬಡ್ಡಿ ಮೊತ್ತವನ್ನು ಉಲ್ಲೇಖ (1)ರಲ್ಲಿನ ದಿನಾಂಕ: 21.10.1994ರ ಆದೇಶದಂತೆ ನಿರ್ಧಿಷ್ಟ ಅವಧಿಯಲ್ಲಿ ಸರ್ಕಾರಿ ನೌಕರರು ಮರುಪಾವತಿಸಬೇಕಾಗುತ್ತದೆ. ಮುಂಗಡದ ಸಂಪೂರ್ಣ ಮೊತ್ತ ಮತ್ತು ಬಡ್ಡಿಯನ್ನು ನಿಗಧಿತ ಅವಧಿಯೊಳಗೆ ಮರುಪಾವತಿಸುವುದು ಸರ್ಕಾರಿ ನೌಕರನ ಜವಾಬ್ದಾರಿಯಾಗಿದೆ. ನಿರ್ಧಿಷ್ಟ ಅವಧಿಯಲ್ಲಿ ಮುಂಗಡ ಮತ್ತು ಬಡ್ಡಿಯನ್ನು ಮರುಪಾವತಿಸದಿದ್ದಲ್ಲಿ ನಿಯಮಾನುಸಾರ ದಂಡ ಬಡ್ಡಿಯನ್ನು ವಿಧಿಸಲಾಗುವುದು.

ಆದರೆ, ಈ ರೀತಿ ವಿಧಿಸಲಾದ ದಂಡ ಬಡ್ಡಿಯನ್ನು ಮನ್ನಾ ಮಾಡುವಂತೆ ಕೋರಿ ಇತ್ತೀಚೆಗೆ ಕೆಲವು ಪ್ರಕರಣಗಳು ಆರ್ಥಿಕ ಇಲಾಖೆಗೆ ಬಂದಿವೆ. ಇಂತಹ ಪ್ರಕರಣಗಳನ್ನು ಪರಿಶೀಲಿಸಿದಾಗ ಸರ್ಕಾರಿ ನೌಕರರ ವೇತನ ಚೀಟಿಯಲ್ಲಿ ಮತ್ತು ಒಂದು ಇಲಾಖೆ/ಹುದ್ದೆಯಿಂದ ಮತ್ತೊಂದು ಇಲಾಖೆ/ಹುದ್ದೆಗೆ ವರ್ಗಾವಣೆಗೊಂಡಾಗ ವಿತರಿಸಲಾಗುವ ಎಲ್.ಪಿ.ಸಿ. ಯಲ್ಲಿ ಮರುಪಾವತಿಸಬೇಕಿರುವ ಮುಂಗಡದ ಬಾಕಿ ಮತ್ತು ಬಡ್ಡಿ ಮೊತ್ತ ಮತ್ತು ಕಂತುಗಳ ಸಂಖ್ಯೆ ನಮೂದಿಸದ ಕಾರಣ ಸಂಬಂಧಪಟ್ಟ ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿ (ಡಿಡಿಓ), ಮುಂಗಡ ಅಥವಾ ಬಡ್ಡಿ ಮೊತ್ತವನ್ನು ವೇತನದಲ್ಲಿ ಕಡಿತ ಮಾಡದಿರುವ ಅಂಶವನ್ನು ಆರ್ಥಿಕ ಇಲಾಖೆಯು ಗಮನಿಸಿದೆ.

..2

ಮುಂಗಡದ ಸಂಪೂರ್ಣ ಮೊತ್ತ ಮತ್ತು ಬಡ್ಡಿಯನ್ನು ನಿಗದಿತ ಅವಧಿಯೊಳಗೆ ಮರುಪಾವತಿಸುವುದು ಸರ್ಕಾರಿ ನೌಕರನ ಜವಾಬ್ದಾರಿಯಾಗಿದ್ದರೂ ಸಹ, ಮುಂಗಡ ಪಡೆದಿರುವ ಸರ್ಕಾರಿ ನೌಕರರಿಂದ ಬಾಕಿ ಉಳಿದಿರುವ ಮುಂಗಡದ ಮೊತ್ತ ಮತ್ತು ಕಂತುಗಳ ಸಂಖ್ಯೆಯ ವಿವರಗಳನ್ನು ವೇತನ ಚೀಟಿ ಮತ್ತು ಎಲ್.ಪಿ.ಸಿ.ಗಳಲ್ಲಿ ತಪ್ಪದೇ ನಮೂದಿಸುವಂತೆ ತಮ್ಮ ಅಧೀನದಲ್ಲಿ ಬರುವ ಎಲ್ಲಾ ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳಿಗೆ ಸೂಚನೆ ನೀಡಲು ಕೂಡಲೇ ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿದೆ.

(ಎನ್. ಶ್ರೀನಿವಾಸ ಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು)

ಗೆ:

1. ಮಹಾಲೇಖಪಾಲರು (ಲೆಕ್ಕ ಪತ್ರ ಮತ್ತು ತನಿಖೆ), ಕರ್ನಾಟಕ, ಬೆಂಗಳೂರು,
2. ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು,
3. ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು,
4. ಪ್ರಧಾನ ಕಾರ್ಯದರ್ಶಿ, ಕರ್ನಾಟಕ ವಿಧಾನ ಮಂಡಲ, ವಿಧಾನ ಸೌಧ, ಬೆಂಗಳೂರು,
5. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ ಸಚಿವಾಲಯ/ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ, ಬೆಂಗಳೂರು,
6. ಎಲ್ಲಾ ಇಲಾಖಾ ಮುಖ್ಯಸ್ಥರು,
7. ಎಲ್ಲಾ ಜಿಲ್ಲಾಧಿಕಾರಿಗಳು/ಕಾರ್ಯನಿರ್ವಾಹಕ ಅಧಿಕಾರಿಗಳು,
8. ರಿಜಿಸ್ಟ್ರಾರ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು,
9. ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ನ್ಯಾಯಮಂಡಳಿ, ಬೆಂಗಳೂರು,
10. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು,
11. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ,
12. ಕಛೇರಿ ಪ್ರತಿ /ಶಾಖಾರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.